ಸೂಳ್ಯ ಮಂತ್ತು ಪುತ್ತೂರು ತಾಲ್ಲೂಕಿನ ತೋಟ ಕಾರ್ಮಿಕರ ಬಗ್ಗೆ

೭೨೯. ಶ್ರೀ ಕೆ. ಕುಶಾಲ (ಸೂಳ್ಯ).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರದ ಸೂಳ್ಯ ತಾಲ್ಲೂಕು ಮತ್ತು ಪುತ್ತೂರು ತಾಲ್ಲೂಕಿನ, ಕರ್ನಾಟಕ ರಬ್ಬರ್, ಪ್ಲಾಂಟೇಶನ್‌ನಲ್ಲಿ ದುಡಿಯುತ್ತಿರುವ ಕೃಷಿ ಕಾರ್ಮಿಕರಿಗೆ ವಾಸ್ತವ್ಯದ ಮನೆ ಮತ್ತು ಇತರೆ ಸೌಲಭ್ಯಗಳು ಇಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಸೌಲಭ್ಯಗಳನ್ನು ನೀಡಲು ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮಂತ್ರಿ ಕಾರ್ಮಿಕ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಂಗಳೂರು ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ

೭೮೪. ಶ್ರೀ ಗೋಪಾಲ ಮಂಕುಂದ ಕಾನಡೆ (ಸಿರ್ಸಿ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಮಾರ್ಕೆಟಿಂಗ್ ಫೆಡರೇಷನ್ ನಷ್ಟದಲ್ಲಿ ನಡೆಯುತ್ತಿದೆಯೇ

ಆ) ಹಾಗಿದ್ದಲ್ಲಿ ಯಾವ ವರ್ಷದಿಂದ ನಷ್ಟದಲ್ಲಿದೆ ಹಾಗೂ ಇದಕ್ಕೆ ಕಾರಣಗಳೇನು ?

ಇ) ಸದರಿ ನಷ್ಟವನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಹೌದು.

ಆ) ಈ ಕೆಳಕಂಡ ಸಾಲಿನಲ್ಲಿ ಮಹಾ ಮಂಡಳವು ನಷ್ಟದಲ್ಲಿರುತ್ತದೆ.–

ವರ್ಷ
೧೯೭೫-೭೬
೧೯೭೬-೭೭ ಮತ್ತು
೧೯೮೫-೮೪
೧೯೮೪-೮೫

ಸದರಿ ಮಂಡಳವು ಮೇಲ್ಕಂಡ ವರ್ಷಗಳಲ್ಲಿ ನಷ್ಟದಲ್ಲಿದ್ದುದಕ್ಕೆ ಕಾರಣಗಳು ಕೆಳಕಂಡಂತಿವೆ.–

೧) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಮೂಲಕ ಮಹಾ ಮಂಡಳಿಗೆ ಗೊಬ್ಬರ ವ್ಯಾಪಾರಕ್ಕಾಗಿ ಕೊಡುತ್ತಿರುವ ಅಲ್ಪಾವಧಿ ಸಾಲದ ಬಾಬ್ತು ಕೊಡಬೇಕಾಗಿದ್ದ ಸುಸ್ತಿ ಬಡ್ಡಿಯನ್ನು ೧೯೭೭–೭೮ನೇ ಸಾಲಿನಿಂದ ಒಟ್ಟು ರೂ. ೮೮,೪೪,೫೦–೮೪ ಗಳನ್ನು ಕೊಡದೇ ಇದ್ದುದರಿಂದ, ಆಡಿಟ್ ವರದಿಯಲ್ಲಿ ಅವಕಾಶ ಮಾಡಿರುವ ಪ್ರಯುಕ್ತ ಈ ವರ್ಷವು ವ್ಯವಹಾರ ನಷ್ಟದಲ್ಲಿ ಸೇರಿರುತ್ತದೆ.

೨) ರೈತರು ಬೆಳೆಯುವ ವ್ಯವಸಾಯೋತ್ಪನ್ನಗಳನ್ನು ಸುಗ್ಗಿಯಲ್ಲಿ ಕೊಂಡು ಮಾರಾಟ ಬೆಲೆಗಳನ್ನು ಅನುಸರಿಸಿ ರೈತರಿಗೆ ಲಾಭದಾಯಕ ಬೆಲೆಗಳನ್ನು ನೀಡುತ್ತಾ ಬಂದುದರಿಂದ, ಬೆಲೆಯ ಏರಿಳಿತದಿಂದ ನಷ್ಟವನ್ನು ಅನುಭವಿಸಿರುತ್ತದೆ.

೩) ತೊಗರಿ ಬೇಳೆ, ಪೆಂಕ್ಕೆ ಜೋಳಗಳ ಬಾಬ್ತು, ಮಾರುಕಟ್ಟೆ ಬೆಲೆಗಳ ಏರಿಳಿತದಿಂದ, ೧೯೮೩-೮೪, ೧೯೮೪–೮೫ ಮತ್ತು ೧೯೮೫–೮೬ನೇ ಸಾಲಿನಲ್ಲಿ ಒಟ್ಟು ೯೬.೯೪ ಲಕ್ಷ ರೂಗಳ ವ್ಯಾಪಾರಿ ನಷ್ಟವನ್ನು ಅನುಭವಿಸಿರುತ್ತದೆ, ಹಾಗೂ